ಸುಮಾರು 85 ಕೋಟಿ ಅಂದಾಜಿನ ಮೇಲೆ 1930 ಎಫ್‌ಆರ್‌ಎಲ್ ಇಟ್ಟು ಡ್ಯಾಂ ರೈಸ್ ಮಾಡುತ್ತಿದ್ದೇವೆ ಅದು ಕೇವಲ ಡೈವರ್ಶನ್, ಅವರ ತಂದೆ ಬಣಕಾರ್‌ರವರು ಒಂದು ಕಾಗದ ಬರೆದಿದ್ದರು, ಅದರ ಬಗ್ಗೆ ನಾನು ಸುಧೀರ್ಘವಾಗಿ ಉತ್ತರ ಬರೆದಿದ್ದೇನೆ. ಇದು ಕರೆಕ್ಟಾಗಿದೆ ಎಂದು ತಿಳಿದುಕೊಳ್ಳಬೇಕು. 330 ಕಿಮೀ ಕೆನಾಲ್ ತೆಗೆಯುವುದಕ್ಕೆ ಟೆಕ್ನಿಕಲ್ ಕಮಿಟಿ, ಎಂಐಸಿ ಬೋರ್ಡ್ ಎಲ್ಲಾ ಒಪ್ಪಿದ್ದಾರೆ. ಮುಂದಿನ ಸಚಿವಸಂಪುಟದಲ್ಲಿ ಅನುಮತಿ ಪಡೆದುಕೊಂಡು ಡ್ಯಾಂ ಕೆಲಸ ಶುರು ಮಾಡುತ್ತೇವೆ. ಇನ್ನು ಕೆನಾಲ್‌ದು. ಒಟ್ಟು ಸುಮಾರು 55 ಕಿಮೀಗೆ ನಾವು ಸರ್ವೆ ಎಲ್ಲಾ ಮುಗಿಸಿದ್ದೇವೆ. ಅಂದಾಜು ಮುಗಿಸಿದ್ದೇವೆ. 35 ರಿಂದ 45 ಕಿಮೀವರೆಗೆ ಟೆಂಡರ್ಸ್ ಸಹ ಕರೆದಿದ್ದೇವೆ. ಒಂದು ಮತ್ತು ಎರಡು ಕಿಮೀ ಮಾತ್ರ ಅರಣ್ಯ ಕ್ಲಿಯರೆನ್ಸ್ ಬರಬೇಕಾಗಿತ್ತು. ಅದು ಪಡೆಯಲು, ಅವರಿಗೂ ಗೊತ್ತಿದೆ, ಸಾಕಷ್ಟು ಹೋರಾಟ ಮಾಡಲಾಗಿದೆ. ಅದು ಬಂದ ಕೂಡಲೇ ಅದನ್ನು ಸ್ಟಾರ್ಟ್ ಮಾಡುತ್ತೇವೆ. ಮೂರನೆಯದು, ಅವರು ಕೇಳಿದ್ದು ಹಣ ಇಟ್ಟಿಲ್ಲ ಎಂದು. ಆ ಭಾಗದಲ್ಲಿರುವ ಎಲ್ಲಾ ಸಚಿವರು ಹಿರಿಯ ನಾಯಕರು, ಅದಕ್ಕೆ ಹೋರಾಟ ಮಾಡುತ್ತಿರುವ ಸಮಿತಿಯವರೆಲ್ಲ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಫೈನಾನ್ಸ್ ಕಮೀಶನರ್, ಚೀಫ್ ಸೆಕ್ರೆಟರಿಗಳೆಲ್ಲಾ ಸೇರಿ ಒಂದು ಕಮಿಟಿ ಮಾಡಿದ್ದೇವೆ. ಮೊನ್ನೆ ಕೂಡ ಅದರ ಒಂದು ಸಭೆ ಮಾಡಿದ್ದೇವೆ. ಯಾವ ರೀತಿ ಫೈನಾನ್ಸನ್ನು ಹೊಂದಿಸಿಕೊಳ್ಳಬೇಕು ಅನ್ನುವ ಬಗ್ಗೆ ಆಲೋಚನೆ ಮಾಡಿದ್ದೇವೆ. ಆ ಫೈನಾನ್ಸ್ ರಿಸೋರ್ಸಿನ ಪ್ರಪೋಸಲ್ಸ್ ಬಂದ ಮೇಲೆ ಸಚಿವಸಂಪುಟದಲ್ಲಿಟ್ಟು ಹಣ ಸಂಗ್ರಹಣೆ ಯಾವರೀತಿ ಮಾಡಬೇಕು. ಎರಡು ವರ್ಷದಲ್ಲಿಯಾವರೀತಿ ಕಂಪ್ಲೀಟ್ ಮಾಡಬೇಕು, ಅತ್ಯಗತ್ಯವಾಗಿ ಎಷ್ಟು ಹಣ ಬೇಕೆಂಬ ಬಗ್ಗೆ ಸಮಿತಿ ವರದಿ ಬಂದ ಕೂಡಲೇ ಈ ಕೆಲಸವನ್ನು ತ್ವರಿತವಾಗಿ ಜಾರಿಗೊಳಿಸಲು ಪ್ರಯತ್ನಮಾಡುತ್ತೇವೆ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಬಳಿ ಜಿಲ್ಲಾ ರೌಡಿ ನಿಗ್ರಹ ದಳದ ಪೋಲೀಸರು ಕೋಟ್ಯಾಂತರ ರೂಪಾಯಿ ಮೌಲ್ಯದ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿರುವುದು.

ಶ್ರೀ ಕೆ. ಅಮರನಾಥ ಶೆಟ್ಟಿ (ಮೂಡಬಿದರೆ) : ಮಾನ್ಯ ಉಪಾಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಬಳಿ ದರೋಡೆಕೋರನಾದ ಬಾಲಕೃಷ್ಣಶೆಟ್ಟಿಯನ್ನು ಜಿಲ್ಲಾ ರೌಡಿ ನಿಗ್ರಹ ದಳದ ಪೊಲೀಸರು ಬಂಧಿಸಿ ಆತನಿಂದ ಕೋಟ್ಯಾಂತರ ರೂಪಾಯಿ ಮೌಲ್ಯದ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿರುವ ಬಗ್ಗೆ ನಾನು ಗೃಹ ಮತ್ತು ವಕ್ಫ್ ರಾಜ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ,

ದಿನಾಂಕ :13-3-98ರಂದು ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕು ನೀಡೋಡಿ ಗ್ರಾಮದ ಕುಖ್ಯಾತ ಅಪರಾಧಿ ಬಾಲಕೃಷ್ಣ ಶೆಟ್ಟಿ ಉರುಫ್ ಬಾಸ್ಕರಶೆಟ್ಟಿ ಉರುಫ್ ಬಾಲಣ್ಣ 29 ವರ್ಷ ಎಂಬುವವರನ್ನು ದ.ಕ. ಜಿಲ್ಲೆಯ ರೌಡಿ ಪ್ರತಿಬಂಧಕ ದಳ ಬಂಧಿಸಿರುತ್ತದೆ. ಪ್ರಕರಣದ ಸಂಕ್ಷಿಪ್ತ ವಿವರ ಈ ರೀತಿ ಇದೆ.

ಮಾಹಿತಿಯ ಆಧಾರದ ಮೇಲೆ ಪಿ.ಎಸ್.ಐ.ಕೆ.ಸಿ. ಅಶೋಕನ್ ಮತ್ತು ಇತರರನ್ನೊಳಗೊಂಡ ರೌಡಿ ಪ್ರತಿಭಂದಕ ದಳ, ದ.ಕ. ಜಿಲ್ಲೆ ಬಾಲಕೃಷ್ಣ ಶೆಟ್ಟಿಯ ಚಲನವಲನದ ಮೇಲೆ ತೀವ್ರ ನಿಗ ಇಟ್ಟಿದ್ದು,

ಆತನು ಮಾರುತಿ ಕಾರಿನಲ್ಲಿ ದಿ:13-3-98ರಂದು ಮಂಗಳೂರಿಗೆ ಬರುತ್ತಿದ್ದಾಗ ಲೇಡಿ ಹಿಲ್ಲ ಸರ್ಕಲ್ ಹತ್ತಿರ ಹಿಂಬಾಲಿಸಿ ಕಾರನ್ನು ನಿಲ್ಲಿಸಿ ಆತನನ್ನು ತಪಾಸಣೆ ಮಾಡಿ ಒಂದು 38 ರಿವಾಲ್ವರ್, ಆರು ಮದ್ದು ಗುಂಡುಗಳು ಮತ್ತು ಕೆಲವು ವಜ್ರದ ಆಭರಣಗಳನ್ನು ವಶಪಡಿಸಿಕೊಂಡಿರುತ್ತದೆ. ವಶಪಡಿಸಿಕೊಂಡ ವಸ್ತುಗಳ ಬಗ್ಗೆ ವಿಚಾರಿಸಿದಾಗ ಸಮಾಧಾನಕರವಾದ ಉತ್ತರವನ್ನು ವಸ್ತುಗಳ ಬಗ್ಗೆ ನೀಡಿರುವುದಿಲ್ಲ. ವಿಚಾರಣೆಯಿಂದ ಆತನು ಮತ್ತು ಅವನ ಸಹಚರರು 1992ರಿಂದ 1996ರವರೆಗೆ ಮುಂಬೈನಲ್ಲಿ ಸರಣಿ ಡಕಾಯಿತಿ ಮತ್ತು ಸುಲಿಗೆಗಳನ್ನು ಮಾಡಿರುವುದಾಗಿ ತಿಳಿಸಿರುತ್ತಾನೆ. 1996ರಲ್ಲಿ ಮುಂಬೈ ನಗರದ ಕೊಲಬದಲ್ಲಿ ಒಂದು ಆಭರಣಗಳ ಅಂಗಡಿಯನ್ನು ಲೂಟಿ ಮಾಡಿ ಅಲ್ಲಿಂದ ಚಿನ್ನ, ಪ್ಲಾಟಿನಂ ಮತ್ತು ವಜ್ರಗಳೊಂದಿಗೆ ಪರಾರಿಯಾಗಿರುತ್ತಾನೆ. ದ.ಕ. ಜಿಲ್ಲೆಯ ಪೋಲೀಸರು ಮತ್ತು ಮುಂಬೈ ಪೋಲೀಸರು 1996ರಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವು ಆರೋಪಿಗಳನ್ನು ಬಂಧಿಸಿರುತ್ತಾರೆ. ಆದಾಗ್ಯೂ ಸಿಂಹ ಪಾಲನ್ನು ತೆಗೆದುಕೊಂಡು ಪರಾರಿಯಾದ ಬಾಲಕೃಷ್ಣ ಶೆಟ್ಟಿಯನ್ನು ಬಂಧಿಸಲು ಸಾಧ್ಯವಾಗಿರುವುದಿಲ್ಲ. ಆತನು ಸ್ವಗ್ರಾಮಕ್ಕೆ ಹಿಂತಿರುಗಿದ ಮೇಲೆ ತನ್ನ ಹೆಸರನ್ನು ಮತ್ತು ವಾಸಸ್ಥಳವನ್ನು ಬದಲಾಯಿಸಿಕೊಂಡಿರುತ್ತಾನೆ. ವಿಚಾರಣೆಯ ಸಮಯದಲ್ಲಿ ಆತನು ತನ್ನ ಹೇಳಿಕೆಯಲ್ಲಿ ಕೆಲವು ವಸ್ತುಗಳನ್ನು ವಿವಿಧ ಸ್ಥಳಗಳಲ್ಲಿ ಮಾರಿರುವುದಾಗಿ ಹಾಗೂ ಆತನ ಊರು ನಡೋಡಿಯಲ್ಲಿ ಉಳಿದ ವಸ್ತುಗಳನ್ನು ಇಟ್ಟಿರುವುದಾಗಿಯೂ ತಿಳಿಸಿರುತ್ತಾನೆ. ತನ್ನ ಮನೆಯನ್ನು ಸಹ ದೋಚಿದ ವಸ್ತುಗಳ ಮಾರಾಟದಿಂದ ಬಂದ ಹಣದಿಂದ ಕೊಂಡಿರುತ್ತಾನೆ.

ಮೇಲ್ಕಂಡ ಮಾಹಿತಿಯ ಆಧಾರದ ಮೇಲೆ ಒಂದು ರಿವಾಲ್ವರ್, ಅಮ್ಯೂನಿಷನ್ ಮಾರುತಿ ಕಾರು ಮತ್ತು ಇತರ ವಸ್ತುಗಳನ್ನು ವಶಪಡಿಸಿಕೊಂಡು ಮಂಗಳೂರು ಉತ್ತರ ಪೋಲೀಸ್ ಠಾಣೆಯಲ್ಲಿ ಮೊ.ಸಂ. : 62 : 98 ಕಲಂ 102 ಸಿಆರ್‌ಪಿಸಿ ಮತ್ತು ಭಾರತೀಯ ಶಾಸ್ತ್ರಾಸ್ತ್ರ ಕಾಯ್ದೆ ಸೆಕ್ಷನ್ 3 ಮತ್ತು 25ರ ಪ್ರಕಾರ ಪ್ರಕರಣವನ್ನು ದಾಖಲು ಮಾಡಿಕೊಂಡಿರುತ್ತದೆ. ಆರೋಪಿ ಬಾಲಕೃಷ್ಣ ಶೆಟ್ಟಿಯನ್ನು ಬಂಧಿಸಿ ಮಂಗಳೂರಿನ ಎರಡನೇ ಜೆ.ಎಂ.ಎಫ್.ಸಿ. ನ್ಯಾಯಾಲಯದ ಮುಂದೆ ದಿನಾಂಕ 13-3-98ರಂದು ಹಾಜರು ಪಡಿಸಿದ್ದು, ನ್ಯಾಯಾಲಯವು ದಿ : 23-3-98ರವರೆಗೆ ಆರೋಪಿಯನ್ನು ಪೋಲೀಸ್ ಬಂಧನಕ್ಕೆ ವಹಿಸಿದೆ. ದಿ:14-3-98ರಂದು ನಿಡೋಡಿ ಗ್ರಾಮದ ಮನೆಯನ್ನು ಹುಡುಕಿ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ವಶಪಡಿಸಿಕೊಂಡಿರುವ ವಸ್ತುಗಳ ವಿವರ ಈ ಕೆಳಕಂಡಂತಿರುತ್ತದೆ

ವಸ್ತುಗಳು	ಅಂದಾಜು ಬೆಲೆ (ರೂ. ಲಕ್ಷದಲ್ಲಿ)
ಆಭರಣ	
ಚಿನ್ನ	7.94
ವಜ್ರ	32.67
ಪ್ಲಾಟಿನಂ	1.63
ಬೆಲೆ ಬಾಳುವ ಅಮೂಲ್ಯ ಹರಳುಗಳು	36.76

ಮಾರುತಿ ಕಾರು		2.00
38 ರಿವಾಲ್ವರ್ ಮತ್ತು ಅಮೂನಿಷನ್		1.00
ಗಡಿಯಾರಗಳು (3)		0.13
ಸಂಪಾದಿಸಿರುವ ಆಸ್ತಿ		18.00
ಎಲ್.ಐ.ಸಿ.		1.00
ಸಂಚಿತ ಠೇವಣಿ		1.00
	ಒಟ್ಟು	**102.13**

ತಜ್ಞರು ಮಾಡಿರುವ ಅಂದಾಜಿನಂತೆ ಮೇಲ್ಕಂಡ ವಸ್ತುಗಳ ಬೆಲೆ 102.13 ಲಕ್ಷ ರೂ.ಗಳಾದರು ಪೇಟೆಯ ಬೆಲೆ 2 ಕೋಟಿಗೂ ಅಧಿಕವಾಗಿರುತ್ತದೆ.

ಮೇಲ್ಕಂಡ ಕಾರ್ಯಾಚರಣೆಯನ್ನು ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ದ.ಕ. ರವರ ನೇತೃತ್ವದಲ್ಲಿ ದ.ಕ. ಪೋಲೀಸ್ ಸಿಬ್ಬಂದಿಯವರು ನಡೆಸಿರುತ್ತಾರೆ.

ಬಾಲಕೃಷ್ಣ ಶೆಟ್ಟಿಯನ್ನು ಬಂಧಿಸಿದ ಬಗ್ಗೆ ಮುಂಬೈ ಪೋಲೀಸರಿಗೆ ಮಾಹಿತಿ ನೀಡಿದ್ದು ಮುಂಬೈನಿಂದ ವಿಶೇಷ ತಂಡ ಆಗಮಿಸಿದ್ದು ವಶಪಡಿಸಿಕೊಂಡಿರುವ ವಸ್ತುಗಳನ್ನು ಪರಿಶೀಲಿಸಿ ಆರೋಪಿಯನ್ನು ಗುರುತಿಸಿದ್ದು, ಸದರಿ ವಸ್ತುಗಳು ಕೊಲಬ ಪೋ. ಠಾಣೆ ಮೊ.ಸಂ. : 187 : 96 ಕಲಂ : 395-150-452-342-424 ಜೊತೆಗೆ 34 ಐಪಿಸಿ ಮತ್ತು ಭಾರತೀಯ ಶಸ್ತ್ರಾಸ್ತ್ರ ಕಾಯ್ದೆ 3, 4, ಮತ್ತು 25ರ ಅಡಿಯಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದ್ದಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಆರೋಪಿಯ ವಿಚಾರಣೆ ಪ್ರಗತಿಯಲ್ಲಿರುತ್ತದೆ.

ಶ್ರೀ ಕೆ. ಅಮರನಾಥಶೆಟ್ಟಿ : ಮಾನ್ಯ ಉಪಾಧ್ಯಕ್ಷರೆ, ದರೋಡೆ ಅಥವಾ ಕೊಲೆಗಳಾದಂಥ ಸಂದರ್ಭದಲ್ಲಿ ಪೊಲೀಸರುಗಳು ನಿಷ್ಕ್ರೀಯರಾಗಿದ್ದಾರೆಂಬ ಬಗ್ಗೆ ಆಗಿಂದಾಗ್ಗೆ ಹೇಳುವುದನ್ನು ಕೇಳುತ್ತಿರುತ್ತೇವೆ. ಆದರೂ ಕೂಡ ರಾಜ್ಯದಲ್ಲಿ ಉತ್ತಮ ಪೊಲೀಸ್ ಅಧಿಕಾರಿಗಳಿದ್ದಾರೆ ಎನ್ನುವುದಕ್ಕೆ ಮಂಗಳೂರಿನ ಸೂಪರಿಂಟೆಂಡೆಂಟ್ ಆಫ್ ಪೊಲೀಸ್‌ರವರು ಒಂದು ನಿದರ್ಶನವೆಂದರೆ ತಪ್ಪಾಗಲಿಕ್ಕಿಲ್ಲ. ಮಂಗಳೂರಿನ ಎಸ್.ಪಿ. ಮತ್ತು ರೌಡಿ ನಿಗ್ರಹ ದಳದವರು ಮಹತ್ಸಾಧನೆ ಮಾಡಿ ದೊಡ್ಡ ಮೊತ್ತದ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿರುವುದರಿಂದ ಅವರುಗಳನ್ನು ಈ ದಿಸೆಯಲ್ಲಿ ಪುರಸ್ಕರಿಸಿ ರಾಜ್ಯ ಪ್ರಶಸ್ತಿಗೆ ಅವರುಗಳ ಹೆಸರುಗಳನ್ನು ಸೂಚಿಸಬೇಕೆಂದು ಸರ್ಕಾರವನ್ನು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಾದ ಅಮರನಾಥ ಶೆಟ್ಟಿಯವರು ಹೇಳಿರುವ ಸಲಹೆಯನ್ನು ಪೂರ್ತಿಯಾಗಿ ಒಪ್ಪುತ್ತೇನೆ. ರೌಡಿ ನಿಗ್ರಹ ದಳದವರಿಗೆ ಮತ್ತು ಜಿಲ್ಲಾ ಸೂಪರಿಂಟೆಂಡೆಂಟ್ ಆಫ್ ಪೊಲೀಸ್‌ರವರಿಗೆ ಸೂಕ್ತ ಬಹುಮಾನ ಕೊಡುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ.